# ಆ್ಯಂಡ್ರಾಯ್ಡ್‌ಗೆ ಹೊಸ ಲೋಗೊ

■ ಶಶಿಕುಮಾರ್ ಸಿ.

ಹೊಸ ಆ್ಯಂಡ್ರಾಯ್ಡ್ (Android 14) ಆವೃತ್ತಿಯನ್ನು ಬಿಡುಗಡೆ ಮಾಡುವ ಯೋಜನೆಯಲ್ಲಿರುವ ಗೂಗಲ್, ಅದಕ್ಕಿಂತ ಮುಂಚಿತವಾಗಿಯೇ ಆ್ಯಂಡ್ರಾಯ್ಡ್ ಕಾರ್ಯಾಚರಣೆ ವ್ಯವಸ್ಥೆಗೆ (ಒಎಸ್) ಹೊಸ ಲೋಗೊ ಬಿಡುಗಡೆ ಮಾಡಿದೆ. ಇದರ ಜೊತೆಗೆ 'ಕ್ಲಾಸಿಕ್ ಗ್ರೀನ್ ಆ್ಯಂಡ್ರಾಯ್ಡ್'ಗೆ ಹಲವು ಸುಧಾರಣೆಗಳನ್ನು ತಂದು ಆ್ಯಂಡ್ರಾಯ್ಡ್ ಅನ್ನು ರಿಬ್ರ್ಯಾಂಡ್ ಮಾಡಲು ಗೂಗಲ್ ಮುಂದಾಗಿದೆ.




ಆ್ಯಂಡ್ರಾಯ್ಡ್ ಬ್ರ್ಯಾಂಡಿಂಗ್ ಬಗ್ಗೆ ಟೀಸರ್ ಬಿಡುಗಡೆ ಮಾಡುತ್ತಿದ್ದ ಗೂಗಲ್ ಇದೀಗ ಅದನ್ನು ಸಾಂಕೇತಿಕವಾಗಿ ಜಾರಿಗೆ ತಂದಿದೆ. ಆಲ್ಫಾಬೆಟ್ ಕಂಪನಿಯು ಶೀಘ್ರ ಬಿಡುಗಡೆಗೊಳ್ಳಲಿರುವ ಆ್ಯಂಡ್ರಾಯ್ಡ್ 14 ಆಪರೇಟಿಂಗ್ ಸಿಸ್ಟಂನ ಕೆಲವು ಹೊಸ ಫೀಚರ್‌ಗಳ ಬಗ್ಗೆ ಪ್ರಸ್ತಾಪಿಸುವಾಗ ಹೊಸ ಲೋಗೊವನ್ನೂ ಸಂಕ್ಷಿಪ್ತವಾಗಿ ಪ್ರದರ್ಶಿಸಿತ್ತು.

ಆ್ಯಂಡ್ರಾಯ್ಡ್‌ನ ದೀರ್ಘಕಾಲದ ಮ್ಯಾಸ್ಕಾಟ್ – ಡ್ರಾಯ್ಡ್ ಎಂದಿಗಿಂತಲೂ ಈ ಬಾರಿ ಭಿನ್ನವಾಗಿದೆ. ಈ ಬಾರಿ ಇದು ಪೂರ್ಣ ಭಾಗದ ಬದಲು ಅರ್ಧ ತಲೆಯ ಭಾಗದಲ್ಲಿ ಮಿಂಚುತ್ತಿದ್ದು, ತಲೆಯ ಜೊತೆಗೆ ಸಂಪೂರ್ಣ ದೇಹವೂ ಪ್ರದರ್ಶನಗೊಳ್ಳಲಿದೆ.

ಲೋಗೊ ಬಗ್ಗೆ ವಿವರಿಸಿರುವ ಗೂಗಲ್, 'ಕಳೆದ ನಾಲ್ಕು ವರ್ಷಗಳಿಂದ ಗೂಗಲ್ ಲೋಗೊ ಅಪ್‌ಡೇಟ್ ಮಾಡಿರಲಿಲ್ಲ. ಹಾಗಾಗಿ ಕಂಪನಿಯು ಗಮನಾರ್ಹವಾಗಿ ಈ ಬಗ್ಗೆ ಚಿಂತಿಸಿ ಹೊಸ ಲೋಗೊ ಬಿಡುಗಡೆ ಮಾಡಿದೆ. ಈ ವರ್ಷದ ನಂತರ ಆ್ಯಂಡ್ರಾಯ್ಡ್‌ನ ಹೊಸ ಫೀಚರ್‌ಗಳು ಹಾಗೂ ಸೇವೆಗಳಲ್ಲಿ ಹೊಸ ಲೋಗೊ ಕಾಣಿಸಿಕೊಳ್ಳಲಿದೆ' ಎಂದಿದೆ.

ಹೊಸ ಆ್ಯಂಡ್ರಾಯ್ಡ್ ಲೋಗೊವಿನ ಪೇರೆಂಟ್ ಬ್ರ್ಯಾಂಡ್ ಮತ್ತು ಮೊಬೈಲ್ ಪ್ಲಾಟ್‌ಫಾರ್ಮ್ ಅನ್ನು ಒಂದೇ ವೇದಿಕೆಯಡಿ ನಿರ್ವಹಿಸುವ ಏಕೀಕರಣ ವ್ಯವಸ್ಥೆಯನ್ನು ಜಾರಿಗೆ ತರುವ ಸುಳಿವನ್ನು ಗೂಗಲ್ ನೀಡಿದ್ದು, ಭವಿಷ್ಯದಲ್ಲಿ ಈ ಬಗ್ಗೆ ಅಧಿಕೃತ ಮಾಹಿತಿ ಹೊರಬೀಳಬಹುದು. ಲೋಗೊದೊಂದಿಗೆ ಮತ್ತಷ್ಟು ಹೊಸ ಫೀಚರ್‌ಗಳನ್ನು ಆ್ಯಂಡ್ರಾಯ್ಡ್‌ನಲ್ಲಿ ಕಲ್ಪಿಸುವ ಸಾಧ್ಯತೆಯೂ ಇದೆ.

ಲೋಗೊ ಜೊತೆಗೆ ಎಟ್ ಎ ಗ್ಲಾನ್ಸ್ ವಿಜೆಟ್ ಕೂಡ ಅಪ್‌ಡೇಟ್ ಮಾಡಿದೆ. ಈ ವಿಜೆಟ್ ಹವಾಮಾನ ಮಾಹಿತಿಯನ್ನು ಬಳಕೆದಾರರಿಗೆ ನೀಡುತ್ತದೆ. ಅಪ್‌ಡೇಟ್ ಆಗಿರುವ ವಿಜೆಟ್ ಮಾತ್ರೆ ಆಕಾರದಲ್ಲಿದ್ದು, ಇದು ಟ್ರಾವೆಲ್ಸ್ ಅಪ್‌ಡೇಟ್ಸ್ ಅನ್ನೂ ನೀಡುತ್ತದೆ. ಜೊತೆಗೆ ವ್ಯಾಲೆಟ್ ಆ್ಯಪ್ ಕೂಡ ಅಪ್‌ಡೇಟ್ ಮಾಡಿದೆ. ಮತ್ತೊಂದೆಡೆ ಜೂಮ್ ಮತ್ತು ಆ್ಯಂಡ್ರಾಯ್ಡ್ ಆಟೊ ಎರಡನ್ನೂ ಒಂದುಗೂಡಿಸುವುದಾಗಿ ಹೇಳಿದೆ. ■

# ಎಕ್ಸ್ ಆಡಿಯೊ, ವಿಡಿಯೊ ಕರೆ ಶೀಘ್ರ

ಆಡಿಯೊ ಹಾಗೂ ವಿಡಿಯೊ ಕರೆ ಮಾಡಲು ಇನ್ನುಮುಂದೆ ಫೋನ್ ನಂಬರ್ ಅಗತ್ಯವಿಲ್ಲ... ಇಂತಹದ್ದೊಂದು ಪ್ರಯೋಗಕ್ಕೆ ಸಾಮಾಜಿಕ ಜಾಲತಾಣ ಎಕ್ಸ್ (ಟ್ವಿಟರ್) ಕೈಹಾಕಿದ್ದು, ತನ್ನ ಆನ್‌ಲೈನ್ ಪ್ಲಾಟ್‌ಫಾರ್ಮ್‌ನಲ್ಲಿ ಶೀಘ್ರ ಈ ಸೌಲಭ್ಯ ಕಲ್ಪಿಸಲು ಕಂಪನಿಯ ಮಾಲೀಕ ಎಲಾನ್ ಮಸ್ಕ್ ಸಿದ್ಧತೆ ನಡೆಸಿದ್ದಾರೆ.

ಎಕ್ಸ್ ಬಳಕೆದಾರರೆಲ್ಲರೂ ಯಾವುದೇ ಫೋನ್ ನಂಬರ್‌ನ ಅಗತ್ಯವಿಲ್ಲದೆ ಭವಿಷ್ಯದಲ್ಲಿ ಆಡಿಯೊ ಹಾಗೂ ವಿಡಿಯೊ ಕರೆಯನ್ನು ಮಾಡಬಹುದಾಗಿದ್ದು, ಅದಕ್ಕಾಗಿ ಎಕ್ಸ್ ಖಾತೆಯನ್ನು ಹೊಂದಿರುವುದು ಕಡ್ಡಾಯ. ಫೋನ್ ನಂಬರ್ ಇಲ್ಲದೆ ಆಡಿಯೊ, ವಿಡಿಯೊ ಕರೆ ಹೇಗೆ ಸಾಧ್ಯ ಅನ್ನುವುದನ್ನು ಎಕ್ಸ್ ಬಹಿರಂಗಗೊಳಿಸಿಲ್ಲ. ಅಂತರ್ಜಾಲ ಸೌಲಭ್ಯದಿಂದ ಇಂತಹದ್ದೊಂದು ಸೇವೆಯನ್ನು ಕಲ್ಪಿಸುವ ಸಾಧ್ಯತೆ ಇದೆ.



ಎಕ್ಸ್ ವೇದಿಕೆಯಲ್ಲಿ ಶೀಘ್ರವೇ ವಿಡಿಯೊ ಮತ್ತು ಆಡಿಯೊ ಸೌಲಭ್ಯ ಬರಲಿದೆ. ಐಒಎಸ್ ಮತ್ತು ಆ್ಯಂಡ್ರಾಯ್ಡ್, ಮ್ಯಾಕ್ ಮತ್ತು ಡೆಸ್ಕ್‌ಟಾಪ್ ಕಂಪ್ಯೂಟರ್‌ಗಳಲ್ಲಿ ಈ ಸೌಲಭ್ಯ ಕಲ್ಪಿಸುವ ಸಾಧ್ಯತೆ ಇದೆ. 'ಎಕ್ಸ್ ಪರಿಣಾಮಕಾರಿ ಜಾಗತಿಕ ಅಡ್ರೆಸ್ ಬುಕ್ ಆಗಿದ್ದು, ಇದನ್ನು ಬಳಸಿ ಕರೆ ಮಾಡಲು ಫೋನ್ ನಂಬರ್ ಬೇಕಾಗಿಲ್ಲ' ಎಂದೂ ಎಕ್ಸ್ ಸಿಇಒ ಲಿಂಡಾ ಯಾಕರಿನೊ ಈ ಬಗ್ಗೆ ಮಾಹಿತಿ ಬಹಿರಂಗಗೊಳಿಸಿದ್ದರು. ■

## ಭಾರತದಲ್ಲಿ ಟೆಸ್ಲಾ

ಭಾರತದಲ್ಲಿ, ತಂತ್ರಜ್ಞಾನ ಆಧಾರಿತ ಟೆಸ್ಲಾ (Tesla) ಕಾರು ಉತ್ಪಾದನಾ ಘಟಕ ನಿರ್ಮಾಣ ವಿಚಾರವು ಅಧಿಕೃತಗೊಂಡಿದ್ದು, ಫ್ಯಾಕ್ಟರಿ ನಿರ್ಮಿಸಲು ವರ್ಷಾಂತ್ಯಕ್ಕೆ ಸ್ಥಳ ಗುರುತಿಸುವುದಾಗಿ ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಎಲಾನ್ ಮಸ್ಕ್ ಹೇಳಿದ್ದಾರೆ.

ವಾಲ್‌ಸ್ಟ್ರೀಟ್ ಜರ್ನಲ್‌ನ ಥೋರಾಲ್ಡ್ ಬಾರ್ಕರ್ ಕಾರ್ಯಕ್ರಮವೊಂದರಲ್ಲಿ, ಟೆಸ್ಲಾ ಫ್ಯಾಕ್ಟರಿ ಆರಂಭಕ್ಕೆ ಭಾರತವು ಆಸಕ್ತಿ ಹೊಂದಿದೆಯೇ ಎಂದು ಕೆಲವರು ಎಲಾನ್ ಮಸ್ಕ್ ಅವರಿಗೆ ಕೇಳಿದ್ದರು. ಆದಕ್ಕೆ ಉತ್ತರಿಸಿದ ಎಲಾನ್ ಮಸ್ಕ್, 'ಖಂಡಿತವಾಗಿ' ಎಂದಿದ್ದರು.